# ಅಧ್ಯಾಯ 56

ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ




ಛಂದ :-ಈ ಚರಿತ್ರದ ಪಠಣಮಾತ್ರದಿ ಸಿದ್ಧನಾಥನು
ಒಲಿವನು ವಾಚಕರಿಗತ್ಯಂತ ಕೃಪೆಯಿಂದೀವನ್ನೈ
ಭಾವನೆಯನು ಶುದ್ಧ ಭಾವನೆಯಿಂದಲರಿವರು
ಹೃದಯದೊಳಗಿನ ನಿಜವನು ಆ ದಯಾನಿಧಿ ಸದ್ಗುರುವು
ಭಕ್ತರನು ಸಲೆ ಪಾಲಿಸುವನು..

ಶ್ರೀ ಸಿದ್ಧಾರೂಢ ಸದ್ಗುರುರಾಯನು ಭಕ್ತರ ಮೇಲೆ ಅತ್ಯಂತ ದಯಾವಂತನಾಗಿರುವನು. ಆತನ ಪಾದವನ್ನು ಹಿಡಿಯುವದರಿಂದ ಸರ್ವ ವಿಘ್ನಗಳು ಪರಿಹಾರವಾಗುವವು. ಆತನೇ ಪ್ರೇಮವನ್ನು ಅಂತರ್ಯದೊಳಗೆ ತುಂಬಿ, ಕೈಯಲ್ಲಿ ಲೇಖಣಿಯನ್ನು ಕೊಟ್ಟು ಪ್ರೇಮಖಣಿಯನು ತೆರೆದು, ಗ್ರಂಥ ಬರಿಸಲಿಕ್ಕೆ ಆರಂಭಿಸಿದನು. ಈ ಅದ್ಭುತ ಗ್ರಂಥವನ್ನು ಈ ಅಧ್ಯಾಯದಲ್ಲಿ ಸಮಾಪ್ತಿಮಾಡಬೇಕೆಂದು, ದಯಾಳುವಾದ ಸದ್ಗುರುನಾಥನು ಹೃದಯದಲ್ಲಿ ಪ್ರೇರಿಸಿರುತ್ತಾನೆ. ಭಕ್ತಿ ವೈರಾಗ್ಯ ಮತ್ತು ಜ್ಞಾನ ಭರಿತವಾಗಿಯೂ, ಅತ್ಯಂತ ಸದ್ಗುರು ಪ್ರೇಮದಿಂದ ತುಂಬಿರುವಂಥಾದ್ದಾಗಿಯೂ ಇರುವ ಈ ಗ್ರಂಥವನ್ನು ಸ್ವತಃ ಗುರುರಾಜನೇ ಬರೆದಿರುವನು. ಲೇಖಣಿ ಬರದದ್ದೆಂದು ಯಾರು ಹೇಳುವರು ? ಅಂಥಾ ಲೇಖಣಿಯಂತೆ ನಾನು ಆತನ ಕೈಯಲ್ಲಿರುವೆನು. ಆದ್ದರಿಂದಲೇ ಈ ಗ್ರಂಥವು ಇಷ್ಟು ಸುಂದರವಾಗಿ ಅತಿ ತ್ವರೆಯಿಂದ ಸಿದ್ಧವಾಯಿತು. ಇದಲ್ಲದಿದ್ದರೆ, ಜಡ ಮತ್ತು ಅಲ್ಪ ಮತಿಯಾಗಿಯೂ, ಭಕ್ತಿ ಪ್ರೇಮ ರಹಿತನಾಗಿಯೂ, ಸಂಸಾರ ವಿಷಯಗಳಲ್ಲಿ ಅಖಂಡ

ತೊಡಕಿರುವವನಾಗಿಯೂ, ನಿತ್ಯ ಅಜ್ಞಾನ ಸ್ಥಿತಿಯಲ್ಲಿರುವವನಾಗಿಯೂ, ಇರುವ ನನ್ನಿಂದ ಈ ಗ್ರಂಥವು ಹ್ಯಾಗೆ ಸಿದ್ಧಿಸಿತ್ತು ಇಂಥಾ ನನ್ನನ್ನು ನಿಮಿತ್ಯಮಾಡಿ ಸದ್ಗುರುರಾಯನೇ ಗ್ರಂಥವನ್ನು ರಚಿಸಿರುವನು. ಸದ್ಗುರುವಿನ ಕಾರ್ಯಗಳು

ಅದ್ಭುತವಾಗದವುಗಳು. ಅವುಗಳ ಪೈಕಿ ಇದೊಂದು ಅತ್ಯದ್ಭುತವಾದದ್ದು. ನನ್ನ ಕೈಯಿಂದಾದರೂ ಹ್ಯಾಗೆ ಗ್ರಂಥ ಭರಿಸಿದನೆಂಬುವದು ನನಗೆ ಬಹಳ ಚಮತ್ಕಾರ ಕಾಣಿಸುವದು. ಇರಲಿ, ದಯಾಳುವಾದ ಆ ಸದ್ಗುರುನಾಥನು, ಭಕ್ತರ ಮೇಲೆ ಬಹು ಪ್ರೇಮವುಳ್ಳವನಾಗಿದ್ದು, ಅವರನ್ನು ಸುಲಭವಾಗಿ ತಾರಿಸುವ ಉದ್ದೇಶದಿಂದ ಪವಿತ್ರವಾದ ಗ್ರಂಥವನ್ನು ಬರೆದಿರುವನು. ಅವನು ಕೃಪಾಸಾಗರನೇ ಇದ್ದು, ಆತನಲ್ಲಿ ಪ್ರೇಮದ ತೆರೆಗಳೇ ಬರುತ್ತಿರುವವು. ಅವುಗಳೊಳಗೆ ಯಾರು ಮುಳುಗುವವರು ಅವರು ಅಮರರಾಗುವರು. ಭಕ್ತರಿಗೆ ಅತ್ಯಂತ ಪವಿತ್ರವಾದ ಆತನ ಈ ಮನೋಹರವಾದ ಚರಿತ್ರವು ಶ್ರವಣ ಮಾತ್ರದಿಂದ ಶ್ರೋತಾ ಜನರಿಗೆ ಆನಂದವನ್ನು ಕೊಡುವುದು,

ಗುರುಕೃಪೆಗೆ ಪಾತ್ರರನ್ನೂ ಮಾಡುವದು. ಕೆಲವು ಶ್ರೋತೃ ಜನರು ವಕ್ತನನ್ನು ಕುರಿತು ಅನ್ನುತ್ತಾರೆ - "ಬಹು ದಿವಸ ಗ್ರಂಥವನ್ನು ಶ್ರವಣ ಮಾಡಿದೆವು, ಆದರೆ ಪ್ರಮಾದ ದೋಷದಿಂದ ಅದರೊಳಗಿನ ಕೆಲವು ಅಂಶ ಮರೆತಿರುವದು." ಮತ್ತೆ ಕೆಲವರು - "ಕೆಲವು ಮನೋಹರವಾದ ಕಥೆಗಳನ್ನು ನಾವು ಶ್ರವಣ ಮಾಡಲಿಲ್ಲ. ಅವುಗಳನ್ನೆಲ್ಲಾ ಈಗ ಸಂಕ್ಷೇಪ ರೀತಿಯಿಂದ ನಮಗೋಸ್ಕರ ಹೇಳತಕ್ಕದ್ದು" ಎಂದನ್ನುವರು. ಈ ಪ್ರಕಾರ ಜನರ ವಚನಗಳನ್ನು ಕೇಳಿ, ವ್ಯಕ್ತಿಯನ್ನು ಬಹು ಸಂತೋಷದಿಂದ, ಈ ಚರಿತ್ರಸಾರವನ್ನು ತೆಗೆದು ಇಲ್ಲಿ ಪ್ರತಿ ಸಂಕ್ಷೇಪವಾಗಿ ಹೇಳುವೆನು. ಹೇ ಶ್ರೋತೃ ಜನರುಗಳಿರಾ, ಶ್ರವಣ ಮಾಡಿರಿ.

ಒಂದನೇ ಅಧ್ಯಾಯದಲ್ಲಿ ಗುರುದೇವತಾ ವಂದವನ್ನು ಮಾಡಿ, ಚತುರ್ವಿಧ ಅಧಿಕಾರಿಗಳ ಲಕ್ಷಣಗಳು ನಿರೂಪಿಸಲ್ಪಟ್ಟಿವೆ.

ಎರಡನೇ ಅಧ್ಯಾಯದಲ್ಲಿ ಸಿದ್ಧ ಜನ್ಮವು, ವಿಚಿತ್ರವಾದ ಬಾಲಕ್ರೀಡೆಯನ್ನು ತೋರಿಸಿ ಜನರಿಗೆ ಬೋಧಿಸಿದ್ದು ನಿರೂಪಿಸಿರುತ್ತದೆ.

ಮೂರನೇ ಅಧ್ಯಾಯದಲ್ಲಿ ಸಿದ್ಧರು ಭೀಮ ಮತ್ತು ಸೋಮನ ಕೂಡ ಗುರುಶೋಧನೆಗೆ ಹೋದಾಗ ಅವರಿಬ್ಬರು ಬಹಳ ಶ್ರಮಪಟ್ಟು ಸಿದ್ಧರನ್ನು ಬಿಟ್ಟು ಮನೆಗೆ ತಿರುಗಿ ಹೋದರು ಎಂಬುದನ್ನು ತಿಳಿಸಿರುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಸಿದ್ಧರು ಗಜದಂಡ ಗುರುಗಳ ಸೇವೆ ಮಾಡಿದ್ದು, ವಾದದಲ್ಲಿ ಸುಬ್ಬಯ್ಯ ಶಾಸ್ತ್ರಿಯನ್ನು ಖಂಡಿಸಿದ್ದು, ಗುರುಗಳು ಸಿದ್ಧಾರೂಢ ಎಂಬ ಈ ನಾಮವನ್ನು ಕೊಟ್ಟದ್ದು ಕಥಿಸಿರುವದು.

ಐದನೇ ಅಧ್ಯಾಯದಲ್ಲಿ ಸಿದ್ಧಾರೂಢರು ತೀರ್ಥಯಾತ್ರೆಗೆ ಹೋದದ್ದು, ಚಿಂತಾಮಣಿ ಆಶ್ರಮದಲ್ಲಿ ವೇದಾಂತ ಬೋಧಿಸಿದ್ದು, ಕರ್ಮಠ ಬ್ರಾಹ್ಮಣನಿಗೆ ಚಾಂಡಾಲತ್ವ ತೋರಿಸಿದ್ದು, ಉಪಾಸನ ಕ್ರಮ ವಿವರಿಸಿದ್ದು ಹೇಳಿರುತ್ತದೆ.

ಆರನೇ ಅಧ್ಯಾಯದಲ್ಲಿ ಪಿಚ್ಚಂಡಯ್ಯ ಮತ್ತು ಮಲಯನಾಥ ಇವರಿಗೆ ಬ್ರಹ್ಮಾತ್ಮಐಕ್ಯತೆಯನ್ನು ಬೋಧಿಸಿದ್ದು ಮತ್ತು ಮಹಾವಾಕ್ಯಾರ್ಥವನ್ನು ದೀಕ್ಷಿತನಿಗೆ ತಿಳಿಸಿ ಆತನ ಶಂಕಾ ನಿರಸನ ಮಾಡಿದ್ದು ನಿರೂಪಿಸಿರುತ್ತದೆ.

ಏಳನೇ ಅಧ್ಯಾಯದಲ್ಲಿ ಗೋಕರ್ಣ ಕ್ಷೇತ್ರದೊಳಗೆ ಸಿದ್ದನಾಥರು ರಮ್ಯಲೀಲಾ ಮಾಡಿದ್ದು ಮತ್ತು ಸಾಧುಗಳ ಮುಖದಿಂದ ಪರಮಾತ್ಮನು ತೃಪ್ತಿ ಹೊಂದುತ್ತಾನೆ ಎಂಬದು ಸರ್ವರಿಗೂ ಬೋಧಿಸಿದ್ದು, ಕಥಿಸಿರುವದು.

ಎಂಟನೇ ಅಧ್ಯಾಯದಲ್ಲಿ ಕಾಶೀ ಕ್ಷೇತ್ರದಲ್ಲಿ ನ್ಯಾಯ ಶಾಸ್ತ್ರಿಗಳ ವಾದವನ್ನು ಸಿದ್ಧರು ನಿವಾರಿಸಿ, ಪಂಚಕೋಶ ಯಾತ್ರೆಯನ್ನು ಪೂರ್ಣ ಮಾಡಿ, ಸಾವುಕಾರನ ಮನೆಯಲ್ಲಿ ಆತನಿಗೆ ಬೋಧಿಸಿದ್ದು ಹೇಳಿರುವದು.

ಒಂಭತ್ತನೇ ಅಧ್ಯಾಯದಲ್ಲಿ ಸುರಸವಾದ ಬಿಂಬ ಪ್ರತಿಬಿಂಬ ವಿಚಾರವನ್ನು ಬೈರಾಗಿ ತಿಳಿಸಿ, ಸಿದ್ಧರು ಮಾರವಾಡಿಯ

ರೋಗವನ್ನು ನಿವಾರಿಸಿ ಆತನಿಗೆ ಬದುಕಿಸಿದ್ದನ್ನು ನಿರೂಪಿಸಿರುತ್ತದೆ.

ಹತ್ತನೇ ಅಧ್ಯಾಯದಲ್ಲಿ ಸಿದ್ದರು ಅಭಿಚಾರ ಕರ್ಮಗಳಲ್ಲಿ ಪ್ರವರ್ತನಾದ ಬ್ರಾಹ್ಮಣನಿಗೆ ಅವನ್ನು ಬಿಡಿಸಿ ವೈದಿಕ ಕರ್ಮಗಳಲ್ಲಿ ಪ್ರೇರಿಸಿದ್ದು ಮತ್ತು ವಿಜಾಪುರದಲ್ಲಿ ಬಹಳ ದುಃಖ ಸಹಿಸಿದ್ದು ಕಥಿಸಿರುತ್ತದೆ.

ಹನ್ನೊಂದನೇ ಅಧ್ಯಾಯದಲ್ಲಿ ಸಿದ್ಧಗುರುಗಳು ಜಂಗಮನ ಭ್ರಮೆಯನ್ನು ಕಳೆದದ್ದು ಮತ್ತು ಶಿಪಾಯರು ಹೊಡೆದಾಗ ಶಾಂತಿಯಿಂದ ಅದನ್ನು ಸಹಿಸಿದ್ದು, ನಿರೂಪಿಸಿಯದೆ.

ಹನ್ನೆರಡನೇ ಅಧ್ಯಾಯದಲ್ಲಿ ಸಿದ್ಧಗುರುವರನು ಹುಬ್ಬಳ್ಳಿಯಲ್ಲಿ ನಾನಾ ಲೀಲಾ ತೋರಿಸಿದ್ದು ಮತ್ತು ದುಷ್ಟರು ಬಹು ಪ್ರಕಾರವಾಗಿ ದುಃಖ ಕೊಟ್ಟಾಗ ಅದ್ಭುತ ಶಾಂತಿಯನ್ನು ಪ್ರಕಟಿಸಿದ್ದು ಹೇಳಿಯದೆ.

ಹದಿಮೂರನೇ ಅಧ್ಯಾಯದಲ್ಲಿ ಭಕ್ತ ಜನರು ಸದ್ಗುರುಗಳನ್ನು ರಥದಲ್ಲಿ ಕೂಡ್ರಿಸಿ ಉತ್ಸವ ಮಾಡಿಸಿದ್ದು ಮತ್ತು

ಕಬೀರದಾಸನೆಂಬ ಶಿಷ್ಯನಿಗೆ ಬ್ರಹ್ಮಜ್ಞಾನವನ್ನು ಬೋಧಿಸಿದ್ದು ನಿರೂಪಿಸಿರುತ್ತದೆ.

ಹದಿನಾಲ್ಕನೇ ಅಧ್ಯಾಯದಲ್ಲಿ ಹರಿಹರ ಮತ್ತು ಸರಸ್ವತಿ ಇವರನ್ನು ವ್ಯಾಘ್ರದಿಂದ ಸದ್ಗುರುಗಳು ರಕ್ಷಿಸಿರುವರು.ಅವರು ಸದ್ಗುರುಗಳ ಬಳಿಗೆ ಬಂದು ಆತನನ್ನು ಪ್ರೇಮದಿಂದ ಸ್ತುತಿಸಿದ್ದನ್ನು ಹೇಳಿರುತ್ತದೆ.

ಹದಿನೈದನೇ ಅಧ್ಯಾಯದಲ್ಲಿ ರೂಪಕೃಷ್ಣ ಭಾಗ್ಯವತಿಭಾಯಿ ಇವರ ಪುತ್ರನಿಗೆ ಗ್ರಂಥಿ ರೋಗವು ಆದ ಸಮಯದಲ್ಲಿ ಆ ಸ್ಥಾನಕ್ಕೆ ಸದ್ಗುರುನಾಥನು ಬಂದು ಹುಡುಗನಿಗೆ ಆರೋಗ್ಯವನ್ನುಂಟು ಮಾಡಿದ್ದನ್ನು ಕಥಿಸಿರುತ್ತದೆ.

ಹದಿನಾರನೇ ಅಧ್ಯಾಯದಲ್ಲಿ ಯಾವ ಹುಡುಗನಿಗೆ ಕಾಲಿಗೆ ಸರ್ಪವು ಸುತ್ತಿ, ದಂಶ ಮಾಡುತ್ತಿತ್ತೋ ಅವನನ್ನು ಸದ್ಗುರುವು ಸರ್ಪದಿಂದ ಬಿಡಿಸಿ, ಅವನ ಗಾಯಗಳನ್ನು ನಿರ್ವಿಷಮಾಡಿದನು.

ಹದಿನೇಳನೇ ಅಧ್ಯಾಯದಲ್ಲಿ ನಾಲ್ಕು ಮಂದಿ ಅಯ್ಯನವರು ಗುರುನಿಂದಾ ಮಾಡುತ್ತಲೆ ಅವರ ಲಿಂಗಗಳು ಹರಣವಾದವು. ಆಗ ಸದ್ಗುರುಗಳಿಗೆ ಶರಣು ಹೋದ ಕೂಡಲೆ ಅವರು ಆ ಲಿಂಗಗಳನ್ನು ತೆಗೆದುಕೊಟ್ಟರು.

ಹದಿನೆಂಟನೆಯ ಅಧ್ಯಾಯದಲ್ಲಿ ಪೂರ್ವ ಜನ್ಮದಲ್ಲಿ ವ್ಯಾಘ್ರನಾಗಿದ್ದು ಸತ್ಸಂಗಯೋಗದಿಂದ ನರನಾಗಿ ಹುಟ್ಟಿದ ಗುರಪ್ಪನ ಚರಿತ್ರವು ನಿರೂಪಿಸಿರುತ್ತದೆ.

ಹತ್ತೊಂಬತ್ತನೇ ಅಧ್ಯಾಯದಲ್ಲಿ ಭವಿಷ್ಯ ಕಥನ, ಬೆನಕಪ್ಪನ ಪತ್ನಿಗೆ ರಕ್ಷಿಸಿದ್ದು, ಜೀವಪ್ಪನ ಕುರುಡಾದ ನೇತ್ರಗಳು ಸದ್ಗುರುಹಸ್ತ ಸ್ಪರ್ಶದಿಂದ ದೃಷ್ಟಿಯುಕ್ತವಾದದ್ದು, ಇವೆಲ್ಲ ಕಥಿಸಿರುತ್ತದೆ.

ಇಪ್ಪತ್ತನೇ ಅಧ್ಯಾಯದಲ್ಲಿ, ಭಕ್ತ ಸಾತಪ್ಪನ ಮೈಮೇಲೆ ಉಷ್ಣಘೃತವು ಸಿಡಿದು, ಮೂರ್ಛಾಗತನಾಗಿ ಬಿದ್ದಿರುವಾಗ ಸದ್ಗುರುವು ಆತನನ್ನು ಸ್ವಸ್ಥ ಮಾಡಿದನು.

ಇಪ್ಪತ್ತೊಂದನೇ ಅಧ್ಯಾಯದಲ್ಲಿ, ಸಿದ್ಧರನ್ನು ಪೂಜಿಸಬೇಕೆಂದು ಕೃಷ್ಣಾಬಾಯಿಯು ಹೇಳಲು ಪತಿಯಾದ ರಮಾನಾಥನಿಗೆ ಅದು ಮನಸ್ಸಿಗೆ ಬಾರದೆ ಇದ್ದಾಗ, ಆತನು ಸರ್ವ ಮೂರ್ತಿಗಳು ಸಿದ್ಧಾರೂಢ ರೂಪವಾಗಿರುವದನ್ನು ಕಂಡನು.

ಇಪ್ಪತ್ತೆರಡನೇ ಅಧ್ಯಾಯದಲ್ಲಿ ಮುರಕಿಭಾವಿ ಗ್ರಾಮದಲ್ಲಿ ಬಹು ವೈಭವದಿಂದ ಸದ್ಗುರುಚಿತ್ರದ ಪೂಜೆಯಾಗುತ್ತಿರುವಾಗ, ಭಕ್ತರ ಪ್ರಾರ್ಥನೆಯಿಂದ ಸದ್ಗುರುವು ಪ್ರತ್ಯಕ್ಷನಾದನು.

ಇಪ್ಪತ್ತಮೂರನೇ ಅಧ್ಯಾಯದಲ್ಲಿ ರಾಮರಾಯನಿಗೆ ಸಿದ್ಧರು ಸ್ವಪ್ನದಲ್ಲಿ ಅಭಿನಯವನ್ನು ಕೊಟ್ಟರು. ಸಂತರ ನಡುವೆ ಸದ್ಗುರುಗಳು ಕುಳಿತು ಉಣ್ಣುವದನ್ನು ಕಂಡು ಸರ್ವರೂ ಆಶ್ಚರ್ಯಪಟ್ಟು ಅವರನ್ನು ಪೂಜಿಸಿದರು.

ಇಪ್ಪತ್ತನಾಲ್ಕನೇ ಅಧ್ಯಾಯದಲ್ಲಿ ಗುರವ್ವಾ ಎಂಬವಳು, ಅನ್ನವಿಲ್ಲದೆ ಮಕ್ಕಳು ಸತ್ತ ದುಃಖದಿಂದ ಬಾವಿಯೊಳಗೆ ಹಾರುವಾಗ, ಸದ್ಗುರುವು ಬಂದು ಬಿಡಿಸಿ, ಅವರನ್ನು ಆಶೀರ್ವಾದದಿಂದ ಶ್ರೀಮಂತನ್ನಾಗಿ ಮಾಡಿದನು.

ಇಪ್ಪತ್ತೈದನೇ ಅಧ್ಯಾಯದಲ್ಲಿ ಬಸವಣ್ಣಗೆ ಅಭಿಮಾನ ಬಂದಿರುವಾಗ, ಆತನ ಸರ್ವಸ್ವ ಹರಣವಾಯಿತು. ಭಕ್ತಿ ಹುಟ್ಟಿದ ತರುವಾಯ ಬಂದೀಖಾನೆಯೊಳಗಿಂದ ಸದ್ಗುರುವು ಬಿಡಿಸಿದರು.

ಇಪ್ಪತ್ತಾರನೇ ಅಧ್ಯಾಯದಲ್ಲಿ ಆರುಮಂದಿ ಯವನರು ಬಂದು ಯಥೇಷ್ಟ ತಾಡನ ಮಾಡಿದರು. ಭಕ್ತರ ಆಗ್ರಹದ್ದೇಶೆಯಿಂದ ಸದ್ಗುರುಗಳು ರಥಾರೋಹಣವನ್ನು ಮಾಡಿದರು.

ಇಪ್ಪತ್ತೇಳನೇ ಅದ್ಯಾಯದಲ್ಲಿ, ನೀರಿಲ್ಲ ಉತ್ಸವ ಬೇಡವೆಂದು ಸದ್ಗುರುಗಳಂದಾಗ, ಭಕ್ತರು ನೀರುತರುವ ಕಷ್ಟಸಹಿಲಿಕ್ಕೆ ಸಿದ್ಧರಾದರು. ಆಗ ಸದ್ಗುರುಗಳು ಮೇಘವಿದ್ಯಾ ಉಪಾಸನೇ ಮಾಡಿ ಮಳೆ ತರಿಸಿದರು.

ಇಪ್ಪತ್ತೆಂಟನೇ ಅಧ್ಯಾಯದಲ್ಲಿ ಶಿವಾನಮನಿಗೆ ಶಿಪಾಯರು ಹಿಡಿದುಕೊಂಡು ಹೋಗುವಾಗ ಸಿದ್ಧಾರೂಢರು ಫೌಜುದಾರನಾಗಿ ದಾರಿಯೊಳಗೆ ಬಂದು ಅವನನ್ನು ಬಿಡಿಸಿದರು.

ಇಪ್ಪತ್ತೊಂಭತ್ತನೇ ಅಧ್ಯಾಯದಲ್ಲಿ ಶಿವಪ್ಪ ಭಕ್ತನು ಸತ್ತಾಗ ಸದ್ಗುರುನಾಥರು ಬದುಕಿಸಿದರು. ಮತ್ತು ಅವರು ಜ್ವರದಿಂದ ಪೀಡಿತರಾಗಿದ್ದಾಗ ಒಮ್ಮೆಗೇ ಬಹಳ ಗುಳಿಗೆಗಳನ್ನು ನುಂಗಿ ನೆಟ್ಟಗಾದರು.

ಮೂವತ್ತನೇ ಅಧ್ಯಾಯದಲ್ಲಿ ದಾನವ್ವ ಮೂರನೇ ಸಾರಿ ಪ್ರಸವಿಸಿದ್ದಾಗ, ಸದ್ಗುರುಗಳು ಕೂಸನ್ನು ತೆಗೆದುಕೊಂಡು ಹೋದರು. ಆಮೇಲೆ ಆಕೆಯನ್ನು ಅನುಗ್ರಹಿಸಿ ಎರಡನೇ ಪುತ್ರನನ್ನು ಕೊಟ್ಟರು.

ಮೂವತ್ತೊಂದನೇ ಅಧ್ಯಾಯದಲ್ಲಿ ಶರಣಪ್ಪನನ್ನು ವೃಕ್ಷದ ಮೇಲೆ ಹತ್ತಿಸಿದಾಗ ಆತನು ಬಿದ್ದನು. ಆಗ ಸದ್ಗುರುಗಳು ಆತನಿಗಾದ ಆ ಮೂರ್ಛೆಯ ಅನುಭವವನ್ನೇ ಆತ್ಮಜ್ಞಾನವಾಗಿ ಉಪದೇಶಿಸಿ ಉದ್ಧರಿಸಿದರು.

ಮೂವತ್ತೆರಡನೇ ಅಧ್ಯಾಯದಲ್ಲಿ ಗುರುಪಾದಯ್ಯನು, ಸಿದ್ಧರು ಮಹಾತ್ಮರೆಂದು ತಿಳಿದು, ತನ್ನ ಸ್ತ್ರೀ ಪುತ್ರಾದಿಗಳು ವಿರುದ್ಧರಾದರೂ ಸದ್ಗುರು ಸೇವಾ ಬಿಡಲಿಲ್ಲ.

ಮೂವತ್ತಮೂರನೇ ಅಧ್ಯಾಯದಲ್ಲಿ ಮಡಿವಾಳ ಸ್ವಾಮಿಯವರು ಗರಗದಲ್ಲಿರುವಾಗ, ಸಿದ್ಧರು ಅವರ ದರ್ಶನಕ್ಕೆ ಹೋಗಿದ್ದರು. ಆಗ ಅಲ್ಲಿ ವಿಚಿತ್ರವಾದ ಸಂಗತಿಗಳು ನಡೆದವು.

ಮೂವತ್ತನಾಲ್ಕನೇ ಅಧ್ಯಾಯದಲ್ಲಿ ನಿರುಪಾದನಿಗೆ ಬಂದು ಪ್ರತಿಬಂಧಕ ಮಾಡಿರುವಾಗ ಆತನು ಸದ್ಗುರುಗಳನ್ನು ಪ್ರಾರ್ಥಿಸಿ ಆತ್ಮಘಾತನ ಮಾಡಲಿಕ್ಕೆ ಸಿದ್ಧನಾದ ಕ್ಷಣವೇ ಸದ್ಗುರುಗಳು ಬಂದು ಆತನ ನೈವೇದ್ಯವನ್ನು ಸೇವಿಸಿದರು.

ಮೂವತ್ತೈದನೇ ಅಧ್ಯಾಯದಲ್ಲಿ ಸದ್ಗುರುಗಳು ಭೋಳೆ ಭಕ್ತನಿಗೆ ತನ್ನ ಜ್ವರವನ್ನು ಕೊಟ್ಟರು. ಆತನ ಭಾವಿಯೊಳಗೆ ಬಿದ್ದಾಗ ಅವನಿಗೆ ದರ್ಶನವನ್ನು ಕೊಟ್ಟರು.

ಮೂವತ್ತಾರು ಅಧ್ಯಾಯದಲ್ಲಿ ಪರಶುರಾಮಪಂತನು ರೋಣಕ್ಕೆ ಹೋಗುವಾಗ ಸದ್ಗುರುಗಳು ಟಿಕೀಟು ತಂದು ಕೊಟ್ಟರು. ದಾರಿಯಲ್ಲಿ ಸಿದ್ಧರು ಬಂದು ಅವರಿಗೆ ಉಪಚಾರ ಮಾಡಿದರು.

ಮೂವತ್ತೇಳನೇ ಅಧ್ಯಾಯದಲ್ಲಿ ಕೃಷ್ಣನಿಗೆ ತಂದೆಯು ಕಟ್ಟಿ ಹಾಕಿರುವಾಗ ಶ್ರೀರಾಮನು ಆತನಿಗೆ ಪ್ರಕಟನಾದನು. ಆ

ಗೋವಿಂದಾನಂದನು ಸದ್ಗುರು ವಾರ್ತೆಯನ್ನು ಕೇಳಿ ಅವರಿಗೆ ಬಂಧು ಭೆಟ್ಟಿಯಾದರು.

ಮೂವತ್ತೆಂಟನೇ ಅಧ್ಯಾಯದಲ್ಲಿ ಭಕ್ತ ಕಾಳಪ್ಪ ಬಡಿಗೇರ ಅವರ ಮನೆಯಲ್ಲಿ ಮಾವಿನಹಣ್ಣಿನ ಚಮತಕಾರ ತೋರ್ಸಿದು ಹಾಗೆ ತುಕಪ್ಪನ ಮಗ ಹನುಮಂತನ ಸ್ವಸ್ಥ ಮಾಡಿದ್ದು ನಿರೂಪಿಸಿದೆ

ಮೂವತ್ತೊಂಬತ್ತನಯೇ ಅಧ್ಯಾಯದಲ್ಲಿ ಸದ್ಗುರುಗಳ ವಾರ್ತೆಯನ್ನು ಕೇಳಿ, ತಾಯಿಬಾಯಿಯು ಪೂಜಾಕಾಲದಲ್ಲಿಯೇ ಬಂದು ಭೆಟ್ಟಿಯಾದಳು. ನಳಿನಿಗೆ ಜ್ವರ ಬಂದಿರುವಾಗ ಕೃಪಾದೃಷ್ಟಿಯಿಂದ ಸದ್ಗುರುಗಳು ನೆಟ್ಟಗೆ ಮಾಡಿದರು.

ನಲ್ವತ್ತನೆ ಅಧ್ಯಾಯದಲ್ಲಿ ಕಳ್ಳರು ಬಂದ ನಡುದಾರಿಯಲ್ಲಿ ಯಾತ್ರಿಕರನ್ನು ಪೀಡಿಸುತ್ತಿರುವಾಗ ಸದ್ಗುರುಗಳು ಮಹದ್ಭೀಕರ ರೂಪವನ್ನು ಧರಿಸಿ ಕಳ್ಳರಿಂದ ಅವರನ್ನು ರಕ್ಷಣೆ ಮಾಡಿದರು.

ನಲ್ವತ್ತೊಂದನೇ ಅಧ್ಯಾಯದಲ್ಲಿ ಹಿರೂಬಾಯಿಯನ್ನು ಒಯ್ಯಲಿಕ್ಕೆ ಯಮದೂತರು ಬಂದಾಗ ಸದ್ಗುರುಗಳು ಬಂದು

ಬಿಡಿಸಿದರು. ಆರುತಿಂಗಳ ಮೇಲೆ ಆಕೆಯನ್ನು ವಿಮಾನದಲ್ಲಿ ಕರೆದುಕೊಂಡು ಹೋದರು.

ನಲ್ವತ್ತೆರಡನೇ ಅಧ್ಯಾಯದಲ್ಲಿ ಶಂಕರನ ನಿರಭಿಮಾನ ವರ್ತನ, ಆತನು ಪ್ರವಾಹದಲ್ಲಿ ಹೋಗುತ್ತಿರುವಾಗ ಸಿದ್ಧರು ರಕ್ಷಿಸಿದ್ದು; ಸಿದ್ಧಕೃಪೆಯಿಂದ ಆತನು ಜ್ಞಾನ ಹೊಂದಿದ್ದು,

ನಲ್ವತ್ತಮೂರನೇ ಅಧ್ಯಾಯದಲ್ಲಿ ಗೊಂದವಲೇಕರರು ಗುರುಸೇವಾ ಮಾಡಿದ್ದು, ಹುಬ್ಬ ಳ್ಳಿಗೆ ಬಂದು ಸಿದ್ಧಾರೂಢರಿಗೆ ಭೆಟ್ಟಿಯಾದದ್ದು, ಸದ್ಗುರುಗಳು ಜ್ಞಾನದೇವರ ಅವತಾರ ಅಂದದ್ದು,

ನಲ್ವತ್ತುನಾಲ್ಕನೇ ಅಧ್ಯಾಯದಲ್ಲಿ ತಮ್ಮಣ್ಣಶಾಸ್ತ್ರಿಗೆ ಗುರೂಪದೇಶವಾಗಿ ನಾಮಜಪದಿಂದ ಶ್ರೀರಾಮ ದರ್ಶನವಾದದ್ದು. ಸಿದ್ಧರಾಯರ ಅನುಗ್ರಹದಿಂದ ತಾನು ಕೃತಾರ್ಥನಾದೆನೆಂದು ತಿಳಿದದ್ದು.

ನಲ್ವತ್ತೈದನೇ ಅಧ್ಯಾಯದಲ್ಲಿ ನಾರಾಯಣನ ಮಗಳಾದ ಚಂಪೂಬಾಯಿಯ ಜ್ವರವನ್ನು ಸದ್ಗುರುಗಳು ಬಂದು ಇಳಿಸಿ, ವಧುವರರಿಗೆ ಲಗ್ನ ಮಾಡಿಸಿದ್ದರು.

ನಲ್ವತ್ತಾರನೇ ಅಧ್ಯಾಯದಲ್ಲಿ ಅಕ್ಕಲಕೋಟ ಶರಣಪ್ಪನು ಉಣಕಲ್ಲಿನಿಂದ ಹುಬ್ಬಳ್ಳಿಗೆ ಅನ್ನವನ್ನು ತರಿಸಿ ಭೋಜನ ಮಾಡಿಸಿದನು. ಮತ್ತು ಉಣಕಲ್ಲಿನಲ್ಲಿ ಲಕ್ಷ ಜನರಿಗೆ ಉಣಿಸಿ ಸದ್ಗುರು ಪೂಜಾ ಮಾಡಿದನು.

ನಲ್ವತ್ತೇಳರ ಅಧ್ಯಾಯದಲ್ಲಿ ಸುಬ್ಬಯ್ಯ ಶಾಸ್ತ್ರಿ ಶಿವಪುತ್ರನಾಗಿ ಜನ್ಮಧರಿಸಿ, ವೇದ ಶಾಸ್ತ್ರ ಪಂಡಿತನಾಗಿ ಗುರುಕೃಪೆಯಿಂದ ಜ್ಞಾನ ಪಡೆದದ್ದು ಕಥಿಸಿರುತ್ತದೆ.

ನಲವತ್ತೆಂಟು ಅಧ್ಯಾಯದಲ್ಲಿ ಚರಿತ್ರ ಪಠಣದಿಂದ ರುಕ್ಮಿಣಿಯ ಭೂತವು ಬಿಟ್ಟು ಹೋದದ್ದು ಅವಳು ಸತ್ತಾಗ ಯತಿಯು ಬಂದು ಸದ್ಗುರು ವಿಭೂತಿಯಿಂದ ಬದುಕಿಸಿ ಕಥಿಸಿರುತ್ತದೆ.

ನಲ್ವತ್ತೊಂಭತ್ತನೇ ಅಧ್ಯಾಯದಲ್ಲಿ ದುರ್ಜನರು ಸದ್ಗುರು ಛಳನ ಮಾಡಿದಾಗ ಅವರ ಬುದ್ಧಿಭ್ರಮಣವಾದದ್ದು ಸ್ತ್ರೀಯು ಸಿದ್ದರಿಗೆ

ವಿಷ ಕೊಟ್ಟಾಗ ಅವರು ಸ್ವಸ್ಥರಾಗಿ ಅವಳೇ ಸತ್ತು ಹೋದದ್ದು ಹೇಳುತ್ತದೆ.

ಐವತ್ತನೇ ಅಧ್ಯಾಯದಲ್ಲಿ ಚನಮಲ್ಲಪ್ಪನು ವೈರಾಗ್ಯ ಹೊಂದಿದ್ದು, ಸಿದ್ಧರನ್ನು ರಕ್ಷಿಸಲಿಕ್ಕೆ ಹಾವನ್ನು ಹಿಡಿದದ್ದು, ಹಾವು ಕಡಿದಾಗ ಸದ್ಗುರುಗಳು ರಕ್ಷಿಸಿದ್ದು ನಿರೂಪಿಸಿರುತ್ತದೆ.

ಐವತ್ತೊಂದನೇ ಅಧ್ಯಾಯದಲ್ಲಿ ಖಾಸಗತನು ಉಪಚಾರ ಭಯದಿಂದ ಅಡವಿಯೊಳಗೆ ಹೋಗಿದ್ದಾಗ ಸದ್ಗುರುಗಳು ಆತನನ್ನು ಹುಡುಕಿಕೊಂಡು ಹೋದದ್ದು, ಮತ್ತು ಖಾಸಗತನ ಅದ್ಭುತ ವೈರಾಗ್ಯವು ವರ್ಣಿಸಲ್ಪಟ್ಟಿರುತ್ತದೆ.

ಐವತ್ತೆರಡನೇ ಅಧ್ಯಾಯದಲ್ಲಿ ವಿರಕ್ತನಾದ ನಿರ್ವಾಣಪ್ಪನು ಸದ್ಗುರುಗಳಿಗೆ ವಾಸನಾಕ್ಷಯವನ್ನು ವಿಚಾರಿಸಿದಾಗ, ವಾಸನಾ ನಾಶ ಮಾಡುವಂಥಾ ಆತ್ಮಜ್ಞಾನವನ್ನು ಅವರು ಉಪದೇಶಿಸಿದ್ದು,

ಐವತ್ತಮೂರನೇ ಅಧ್ಯಾಯದಲ್ಲಿ ಲಕ್ಷ್ಮೀಬಾಯಿಯು ಮುಳುಗುವ ಹಡಗದಲ್ಲಿರುವಾಗ, ಸದ್ಗುರುವನ್ನು ಪ್ರಾರ್ಥಿಸಿ

ಕರೆದ  ಕೂಡಲೇ ಆತನು ದೋಣಿಯನ್ನು ತೆಗೆದುಕೊಂಡು ಬಂದು ಅವಳನ್ನು ರಕ್ಷಿಸಿದನು.

ಐವತ್ತನಾಲ್ಕನೇ ಅಧ್ಯಾಯದಲ್ಲಿ ಸದ್ಗುರುಗಳು ಕಾಲಾ ಮಾಡಿದ್ದು, ಶಿವ ಪಾರ್ವತಿ ಸಂವಾದವು ಕಾಲಾ ಪ್ರಸಾದದಿಂದ ಶರಣಾಗತನ ಕುಷ್ಠವನ್ನು ಪರಿಹರಿಸಿದ್ದು ಮತ್ತು ನೀರು ಶುದ್ಧ ಮಾಡಿ ಶಿಷ್ಯರಿಗೆ ಕುಡಿಸಿದ್ದು, ನಿರೂಪಿಸಿಯದೆ.

ಐವತ್ತೈದನೇ ಅಧ್ಯಾಯದಲ್ಲಿ ಸಮಗ್ರ ಗ್ರಂಥದ ಸಾರವು ಶ್ರೋತಾ  ಜನರಿಗೋಸ್ಕರ ನಿರೂಪಿಸಲ್ಪಟ್ಟಿರುತ್ತದೆ. ಅಂತಃಕರಣವು ಪ್ರಸನ್ನವಿರುವಾಗ ಈ ಚರಿತ್ರವನ್ನು ಪಠಿಸತಕ್ಕದ್ದು. ಇದರೊಳಗಿನ ಲಕ್ಷ್ಯಾರ್ಥವನ್ನು ಹೃದಯದೊಳಗೆ ಇಟ್ಟುಕೊಳ್ಳುವುದರಿಂದ ವಿಷಯಾತೀತವಾದ ಸುಖವು ಪ್ರಾಪ್ತವಾಗುವದು. ಸಪ್ತಾಹ ಓದುವ ಕ್ರಮವನ್ನು ಯಥಾಪ್ರಕಾರ ನಿಮಗೆ ಹೇಳುವೆನು. ಪ್ರಥಮ ದಿವಸದಲ್ಲಿ ಎಂಟು ಅಧ್ಯಾಯಗಳನ್ನು ಪಠಿಸತಕ್ಕದ್ದು. ಎರಡನೇ ದಿನ ಹದಿನಾರನೇ ಅಧ್ಯಾಯದವರೆಗೆ ಓದಬೇಕು. ಮೂರನೇ ದಿವಸ

ಇಪ್ಪತ್ತನಾಲ್ಕು, ನಾಲ್ಕನೇ ದಿನ ಮೂವತ್ತೆರಡು ಪೂರ್ಣ ಮಾಡಬೇಕು. ಐದನೇ ದಿನ ನಾಲ್ವತ್ತು, ಆರನೇ ದಿವಸ ನಾಲ್ವತ್ತೆಂಟನೇದರ ಪರ್ಯಂತ ಓದಿ, ಏಳನೇ ದಿವಸ ಐವತ್ತಾರು ಅಧ್ಯಾಯಗಳನ್ನು ಪಠಿಸಿ ಪೂರ್ಣಮಾಡಬೇಕು. ಈ ಪ್ರಕಾರ ಪ್ರೇಮಯುಕ್ತರಾಗಿ ಗ್ರಂಥವನ್ನು ಪಠಿಸುವದರಿಂದ ಮನೋರಥಗಳೆಲ್ಲಾ ಪೂರ್ಣವಾಗಿ, ಸದ್ಗುರುವು ತತ್ಕಾಲವೇ ಕೃಪಾ ಮಾಡುವನು. ಸದ್ಗುರು ಕೃಪೆಯೆಂಬದೇನೂ ಅಲ್ಪವಲ್ಲ. ಯಾವಾತನ ಮೇಲೆ ಆತನ ಕೃಪೆಯಾಗುವದೋ ಅವನು ಸಂಕಲ್ಪಗಳನ್ನೆಲ್ಲಾ ಕಳೆದು, ಲೋಕತ್ರಯದಲ್ಲಿ ಉಪಮಾರಹಿತವಾದ ಆತ್ಮಸ್ವರೂಪವನ್ನು ಕೂಡಲೇ ಕಾಣುವನು. ಆತ್ಮರೂಪ ನೋಡುವದೆಂದರೆ, ಜೀವನು ತಾನೇ ಬ್ರಹ್ಮನಾಗುವದು. ಆ ಬ್ರಹ್ಮದಿಂದ ಈ ಜಗತ್ತೆಲ್ಲಾ ಮಾಯಾ ಮೂಲಕ ಹುಟ್ಟಿರುವದು. ವಿಷಮಯವಾದ ಈ ಜಗವು ಬ್ರಹ್ಮರೂಪನಾದಂಥವನಿಗೆ, ತನ್ನ ಶರೀರವೇ ಎಂಬಂತೆ ಕಾಣಿಸುತ್ತಿರುವಾಗ ಅವನಿಗೆ ವಿಷಯಗಳ ಯೋಗದಿಂದ ಯಾವ ಪ್ರಕಾರ ಉದ್ವೇಗವಾದೀತು ? ಗುರುಕೃಪೆ

ಮಹಿಮೆಯನು ಅಗಾಧವಾಗಿದೆ. ಯಾವತನು ಶುದ್ಧ ಚಿತ್ತಯುಕ್ತನಾಗಿ ಆ ಕೃಪೆಯನ್ನು ಹೊಂದುವನೋ, ಅವನಿಗೆ ಇಂಥಾ ಆತ್ಮಬೋಧವು ಪ್ರಾಪ್ಯವು. ಇದಕ್ಕೂ ಹೆಚ್ಚಿನ ಲಾಭವೇ ಇಲ್ಲ. ಗ್ರಂಥ ಪಠಣದಿಂದ ಇಂಥಾ ಲಾಭ ಸಿಗುತ್ತಿರುವಾಗ, ಅಲ್ಪ ಲಾಭಗಳ ಸುದ್ದಿ ಯಾತಕ್ಕೆ ಬೇಕು ? ಸರ್ವ ದೇಶವು ಕೈ ಸೇರಿದಾಗ, ಗ್ರಾಮ ಒಂದನ್ನು ಯಾರು ಬೇಡುವರು ? ಹಾಗೆ ಚರಿತ್ರ ಪಠಣದಿಂದ ವಿಷಯಪ್ರಾಪ್ತಿ ಎಂದು ಅನ್ನಲಿಕ್ಕೆ ನಾಚಿಕೆ ಬರುತ್ತದೆ. ರಾಜನ ಕಡೆ ಹೋದರೆ ತೃಣ ಸಿಗುವುದು ಎಂದು ಹೇಳಿದರೆ ಎಲ್ಲರೂ ನಗುವರು. ಯಾವಾತನಿಂದ ಈ ಜಗತ್ತೆಲ್ಲ ಉತ್ಪನ್ನವಾಯಿತೋ ಆ ಸದ್ಗುರುವು ತನ್ನ ಚರಿತ್ರ ಪಠಣದಿಂದ ಒಲಿಯುವನು. ಆಗ ಆತನಿಗೆ ಉತ್ತಮವಾದದ್ದನ್ನೇ ಬೇಡಬೇಕು. ವಿಷಯಗಳು ಪ್ರಾಪ್ತವಾಗುತ್ತವೆ ಎಂದು ಫಲಶ್ರುತಿಯು ನನ್ನಿಂದ ಹೇಳಲಾಗದು. ಚರಿತ್ರೆ ಪಠಣದಿಂದ ಚಿತ್ತವು ಶುದ್ಧವಾಗಿ, ಅದರೊಳಗೆ ವಿಷಯ ಕಾಮನೆ ಉಳಿಯುವುದೇ ಇಲ್ಲ. ಇರಲಿ, ಈ ಗ್ರಂಥವು ಮುಗಿಯಿತು. ಶ್ರೋತಾ ಜನರು ಕೇಳುವರು "ಇದನ್ನು ಯಾರು ರಚಿಸಿರುವರು

?" ಅದಕ್ಕೆ - “ಸದ್ಗುರುಗಳು' ಎಂದು ಉತ್ತರ ಕೊಡಲು, ಅವರು - “ನಿಮಿತ್ಯಕ್ಕೆ ಯಾರು ?' ಎಂದು ಪುನಃ ಕೇಳುವರು. ಹಾಗಾದರೆ ನಿಮಿತ್ಯ ಮಾತ್ರ ಶಿವರಾಮನೆಂಬವನಿರುವನು. ಆತನ ತಂದೆಯು ಲಕ್ಷ್ಮಣರಾಯ, ತಾಯಿ ಪದ್ಮಾವತಿಬಾಯಿ. ಇವರು ಪರಮ ವೈರಾಗ್ಯ ವೃತ್ತಿಯುಳ್ಳವರಿರುವರು. ಜ್ಞಾತಿ ಗೌಡಸಾರಸ್ವತ ಬ್ರಾಹ್ಮಣ, ಗೋತ್ರ ಕೌಶಿಕ, ಋಷಿ ವಿಶ್ವಾಮಿತ್ರನು. ಈ ಶಿವರಾಮನು ಮಾತಾಪಿತೃರ ಚರಣಗಳನ್ನು ವಂದಿಸಿ ಸಿದ್ಧ ದಯಾಘನರರನ್ನು ಸೇವಿಸುತ್ತಿರುವನು. ಈತನ ಮೂಲ ಗ್ರಾಮ ಮುಕ್ತಾಪುರ, ಸಾಂಪ್ರತ ಹುಬ್ಬ ಳ್ಳಿ ನಗರದಲ್ಲಿರುವ ಸಿದ್ಧಾಶ್ರಮದಲ್ಲಿ ಸದ್ಗುರುವರರನ ಕೃಪೆಯಿಂದ ವಾಸ ಮಾಡುತ್ತಿರುತ್ತಾರೆ. ಶಕೆ ಹದಿನೆಂಟುನೂರ ನಲವತ್ತನಾಲ್ಕು, ದುಂದುಭಿನಾಮ ಸಂವತ್ಸರದ ಮಾರ್ಗಶೀರ್ಷ ವದ್ಯ ಸಪ್ತಮಿ ಸೋಮವಾರ ದಿವಸ ಈ ಗ್ರಂಥವು ಸಮಾಪ್ತಿಯಾಯಿತು. ಸದ್ಗುರು ದಯಾಘನರರನ್ನೂ, ಶ್ರೋತಾ ಸಜ್ಜನರಾದ ನಿಮ್ಮನ್ನೂ

ವಂದಿಸಿ, ಮಂಗಲಾಚರಣವನ್ನು ಉಚ್ಚರಿಸಿ ಈ ಗ್ರಂಥಲೇಖನವನ್ನು ಪೂರ್ಣ ಮಾಡುವೆನು.

ಶ್ಲೋಕ:- ಬ್ರಹ್ಮಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಮ್ ||

ದ್ವಂದ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿ ಲಕ್ಷ್ಯಮ್ ||

ಏಕಂ ನಿತ್ಯಂ ವಿಮಲಮಚಲಂ ಸರ್ವಧೀ ಸಾಕ್ಷಿಭೂತಂ||

ಭಾವಾತೀತ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ ||

ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್, ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ, ಅತಿ ಮಧುರವಾದ ಈ ಐವತ್ತಾರನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢ ಚರಣಾರವಿಂದಗಳಲ್ಲಿ ಅರ್ಪಿಸಿರುವನು.

ಓಂ ನಮಃ ಶಿವಾಯ

# ಮಂಗಳಾರತಿ

ಗುರುರಾಜ ಸಿದ್ಧಾರೂಢ ಸಮರ್ಥಾ

ಬೆಳಗುವೆನಾರತಿಯಾ ಗುರುವರ ಬೆಳಗುವೆನಾರತಿಯಾ

||ಪು||

ಮೋಕ್ಷಾಪೇಕ್ಷೆಗೆ ತತ್ವಂ  ಪದದ | ಅರ್ಥವ ಭೋಧಿಸಿದೀ

ಗುರುವರ ಅರ್ಥವ ಭೋಧಿಸಿದೀ ||

ಉಕ್ಷಾವಾಹನ ಶಂಕರ ನಮೋಚ್ಚಾರವ ಮಾಡಿಸಿದಿ |

ಗುರುವರಾ ಉಚ್ಚಾರವ ಮಾಡಿಸಿದಿ ||೧||

ಶ್ಯಾಮಧಾಮ ಶ್ರೀರಾಮ ಭಿನ್ನ  ಶಂಕರ ನೀನಿರುವಿ

ಗುರುವರಾ  ಶಂಕರ ನೀನಿರುವಿ || ಕಾಮಾ

ಕ್ರೋಧವನಾಶಿಸಿ ಜಗದೊಳು ಶಾಂತಿಯ ಬಿರಿದಿ

ಗುರುವರ ಶಾಂತಿಯ ಬೀರಿದೀ ||೨||

*ಚರಣ ಭಜಕರಾ ದುರಿತ ವೃಂದವ ತ್ವರಿತದಿ*

*ನಾಶಿಸಿದೀ ಗುರುವರಾ  ತ್ವರಿತದಿ ನಾಶಿಸಿದೀ ||*

*ವರಭೂಲತಾಪುರ ದೈವದಿಂದಲಿ ನಿರುತದಿ ವಾಸಿಸಿದೀ*

*ಗುರುವರಾ  ನಿರುತದಿ ವಾಸಿಸಿದೀ ||೩||*

*ಓಂ ಚೈತನ್ಯಂ ಶಾಶ್ವತಂ ಶಾಂತಂ | ಯೋಮಾತೀತಂ ನಿರಂಜನಂ*

*ನಾದ ಬಿಂದು ಕಲಾತೀತಂ | ತಸ್ಮೈ ಶ್ರೀ ಗುರುವೇ ನಮಃ ||*

## -: ಕೊನೆಯ ಮಾತು :-

ಈ ಗ್ರಂಥವನ್ನು ನಾನು ಸುಮ್ಮನೆ ಕ್ರಿಯೇಟ್ ಮಾಡಿ ಆನ್ಲೈನ್ ಬಿಡಬೇಕು ಅಂತ ಮಾಡಿರುವದಲ್ಲ. ಈ ಗ್ರಂಥದಿಂದ ಬೇರೆಯವರಿಗೆ ಸಹಾಯವಾಗಲಿ ಅನ್ನೋ ಉದ್ದೇಶದಲ್ಲಿ ತಯಾರಿಸಲಾಗಿದೆ.

ಈ ಗ್ರಂಥವನ್ನು ಓದಿದವರು ದಯವಿಟ್ಟು ನಿಮ್ಮಗೆ ಗೊತ್ತು ಇರುವ ಮೂರು ಜನಕ್ಕೆ ಈ ಗ್ರಂಥದ ಪಿಡಿಎಫ್ ಅನ್ನು ಕಳಿಸಿ ಹಾಗೆ ಅವರಿಗೂ ಓದಲು ಹೇಳಿ. ದಯವಿಟ್ಟು ಯಾರಿಗೆ ಸಿದ್ಧಾರೂಢರ ಬಗ್ಗೆ ಗೊತ್ತು ಇರುವದಿಲ್ಲ ಅವರಿಗೆ ಕಳಿಸಿ. ಮಠದ ಸುತ್ತು ಮುತ್ತ ಇರುವರಿಗೆ ಕಳಿಸುವದಕ್ಕಿಂತ ಬೇರೆಯವರಿಗೆ ಕಳಿಸಿದರೆ ಅವರಿಗೂ ಸದ್ಗುರು ಬಗ್ಗೆ ಭಕ್ತಿ ಬರುತ್ತೆ, ಸದ್ಗುರು ಮಹಿಮೆ, ಭಕ್ತಿ, ಕೀರ್ತಿ, ಭಕ್ತರಾದ ನಾವೇ ತಾನೇ ಪ್ರಚಾರ ಮಾಡಬೇಕು.

|||||||||||| ಓಂ ನಮಃ ಶಿವಾಯ //////////////